**ಮೈಸೂರು ವಿಶ್ವವಿದ್ಯಾನಿಲಯ**

Estd 1916

(Re-accredited by NAAC with CGPA 3.47 on four point scale with A Grade)

ಸಂಖ್ಯೆ: ಪ.ವಿ./ಸೇವಾಸಿಂಧು/01/2021-22

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ,
ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570 005
ದಿನಾಂಕ: 09.06.2021

## ಸುತ್ತೋಲೆ

ವಿಷಯ:- ಸಕಾಲ ಸೇವೆಗಳಲ್ಲಿ ಮ್ಯಾನ್ಯುಯಲ್ ಆಗಿ ಅರ್ಜಿ ಸ್ವೀಕರಿಸುವುದನ್ನು ನಿಲ್ಲಿಸಿ, ಅರ್ಜಿ ಸ್ವೀಕೃತಿಗೆ ಆನ್‌ಲೈನ್ ತಂತ್ರಾಂಶದ (ಸೇವಾ ಸಿಂಧು) ಬಳಕೆಯನ್ನು ಕಡ್ಡಾಯಗೊಳಿಸುವ ಬಗ್ಗೆ.

ಉಲ್ಲೇಖ:-1) ಸರ್ಕಾರದ ಅಧೀನ ಕಾರ್ಯದರ್ಶಿ (ವಿಶ್ವವಿದ್ಯಾಲಯಗಳು-1), ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಆದೇಶ ಸಂಖ್ಯೆ:ಇಡಿ2929(ಭಾಗ-1), ಬೆಂಗಳೂರು, ದಿ:28.5.2021.

2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 07.06.2021.

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಈ ಮೂಲಕ ತಮಗೆಲ್ಲಾ ತಿಳಿಯಪಡಿಸುವುದೇನೆಂದರೆ, ಉಲೇಖದ ಮೂಲಕ ಮೈಸೂರು ವಿಶ್ವವಿದ್ಯಾನಿಲಯದಲ್ಲಿರುವ ಕೆಳಕಂಡ ಆನ್‌ಲೈನ್ ಸೇವೆಗಳನ್ನು ವಿದ್ಯಾರ್ಥಿಗಳ ಉಪಯೋಗಕ್ಕೆ ಸೇವಾಸಿಂಧು ಮೂಲಕ ಕೂಡಲೇ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ. ಇದರಂತೆ, ಸಕಾಲ ಸೇವೆಗಳಲ್ಲಿ ಮ್ಯಾನ್ಯುಯಲ್ ಆಗಿ ಅರ್ಜಿ ಸ್ವೀಕರಿಸುವುದನ್ನು ನಿಲ್ಲಿಸಲಾಗಿದೆ. ಅರ್ಜಿ ಸ್ವೀಕೃತಿಗೆ ಆನ್‌ಲೈನ್ ತಂತ್ರಾಂಶದ (ಸೇವಾಸಿಂಧು) ಬಳಕೆಯನ್ನು ಕಡ್ಡಾಯಗೊಳಿಸಿರುವುದರಿಂದ, ವಿದ್ಯಾರ್ಥಿಗಳು ಅರ್ಜಿಗಳನ್ನು ಸೇವಾ ಸಿಂಧುವಿನ ಮುಖಾಂತರವೇ ಅರ್ಜಿ ಸಲ್ಲಿಸಬೇಕೆಂದು ತಿಳಿಸಲಾಗಿದೆ (https://sevasindhu.karnataka.gov.in/sevasindhu/kannada).

ಸದರಿ ಮಾಹಿತಿಯನ್ನು ಕಾಲೇಜು/ಅಧ್ಯಯನ ವಿಭಾಗ/ಸಂಸ್ಥೆ/ಕೇಂದ್ರದ ಸೂಚನಾ ಫಲಕದಲ್ಲಿ ಪ್ರಕಟಿಸಬೇಕೆಂದು ಹಾಗೂ ಈ ಕುರಿತು ವಿದ್ಯಾರ್ಥಿಗಳ ಗಮನಕ್ಕೆ ತರಬೇಕಾಗಿ ಸೂಚಿಸಲಾಗಿದೆ.

| Sl.No. | Name of the Service |
|---|---|
| 1. | Issue of Migration Certificate |
| 2. | Name Correction in the Marks card as per SSLC/PUC |

| | |
|---|---|
| 3. | Removal of Non-completed of lower exam (NCL) |
| 4. | Provisional Pass Certificate (PPC) |
| 5. | Duplicate Marks Cards |
| 6. | Duplicate Degree Certificate |
| 7. | Official Transcript |
| 8. | Duplicate Migration Certificate |
| 9. | Degree Certificate |
| 10. | Verification of Genuineness of marks card/Degree Certificate |

9/6/21

ಕುಲಸಚಿವ (ಪರೀಕ್ಷಾಂಗ)

**ಇವರಿಗೆ:**

1. ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಅಧ್ಯಯನ ವಿಭಾಗಗಳ/ಸಂಸ್ಥೆಗಳ/ಕೇಂದ್ರಗಳ ಮುಖ್ಯಸ್ಥರುಗಳಿಗೆ.
2. ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಘಟಕ/ಸಂಯೋಜಿತ ಕಾಲೇಜು/ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ/ಮುಖ್ಯಸ್ಥರುಗಳಿಗೆ.
3. ನಿರ್ದೇಶಕರು, ಐ.ಸಿ.ಡಿ., ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು- ಈ ಸುತ್ತೋಲೆಯನ್ನು ವಿಶ್ವವಿದ್ಯಾನಿಲಯದ ಅಂತರ್‌ಜಾಲದಲ್ಲಿ ಪ್ರಕಟಿಸಲು ಕೋರಿದೆ.
4. ಕುಲಪತಿ/ಕುಲಸಚಿವ/ಕುಲಸಚಿವ (ಪರೀಕ್ಷಾಂಗ)ರವರ/ಹಣಕಾಸು ಅಧಿಕಾರಿ ಇವರುಗಳ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಕಛೇರಿ ಪ್ರತಿ.

ಅಡಕ: ಸರ್ಕಾರದ ಆದೇಶದ ಪ್ರತಿ.

# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : ಸಕಾಲ ಸೇವೆಗಳಲ್ಲಿ ಮ್ಯಾನ್ಯುಯಲ್ ಆಗಿ ಅರ್ಜಿ ಸ್ವೀಕರಿಸುವುದನ್ನು ನಿಲ್ಲಿಸಿ, ಅರ್ಜಿ ಸ್ವೀಕೃತಿಗೆ ಆನ್‌ಲೈನ್ ತಂತ್ರಾಂಶದ (ಸೇವಾ ಸಿಂಧು) ಬಳಕೆಯನ್ನು ಕಡ್ಡಾಯಗೊಳಿಸುವ ಬಗ್ಗೆ.

**ಓದಲಾಗಿದೆ** : ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ, 2014.

## ಪ್ರಸ್ತಾವನೆ :

ಮೇಲೆ ಓದಲಾದ ಕರ್ನಾಟಕ ಸಕಾಲ ಸೇವೆಯಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ, 2014 ರಲ್ಲಿ ಅನುಸೂಚಿಯಲ್ಲಿ, ವಿಶ್ವವಿದ್ಯಾಲಯಗಳ 44 ನಾಗರೀಕ ಸೇವೆಗಳನ್ನು ಕರ್ನಾಟಕ ಸಕಾಲ ಸೇವೆಗಳಡಿಯಲ್ಲಿ ಗುರುತಿಸಲಾಗಿದೆ.

ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:18.08.2020 ರಂದು ನಡೆದ ಉನ್ನತ ಶಿಕ್ಷಣ ಇಲಾಖೆಯಡಿಯ ವಿಶ್ವವಿದ್ಯಾಲಯಗಳ ಸಕಾಲ ಸೇವೆಗಳನ್ನು, ಸೇವಾಸಿಂಧು ಆನ್‌ಲೈನ್ ಸೇವೆಗಳನ್ನಾಗಿ ಮಾಡುವ ಬಗ್ಗೆ ಚರ್ಚಿಸಲಾಯಿತು. ಸದರಿ ಸಭೆಯಲ್ಲಿ ಅವಶ್ಯಕತೆಯಿಲ್ಲದ ಮತ್ತು ಪುನರಾವೃತ್ತವಾಗಿರುವ ಸೇವೆಗಳನ್ನು ಹೊರತುಪಡಿಸಿ ಉನ್ನತ ಶಿಕ್ಷಣ ಇಲಾಖೆಯಡಿಯ 19 ವಿಶ್ವವಿದ್ಯಾಲಯಗಳಲ್ಲಿ, 31 ಸಕಾಲ ಸೇವೆಗಳನ್ನು, ಸೇವಾಸಿಂಧು ಆನ್‌ಲೈನ್ ಸೇವೆಗಳನ್ನಾಗಿ ಅಭಿವೃದ್ಧಿಪಡಿಸಲು ತೀರ್ಮಾನಿಸಲಾಯಿತು. ಸದರಿ ಸಭೆಯಲ್ಲಿ, ಎಲ್ಲಾ ವಿಶ್ವವಿದ್ಯಾಲಯಗಳಿಗೂ ಅನ್ವಯವಾಗುವಂತೆ, ಏಕರೂಪದ ಅರ್ಜಿ ನಮೂನೆ, ಸೇವಾ ವಿತರಣಾ ವಿಧಾನ(ಕಾರ್ಯಹರಿವು, ಸೇವಾಶುಲ್ಕ) ಏಕರೂಪಗೊಳಿಸುವಂತೆ ಮುಖ್ಯ ಕಾರ್ಯದರ್ಶಿಗಳು ಸೂಚಿಸಿರುತ್ತಾರೆ.

ಎಲ್ಲಾ ವಿಶ್ವವಿದ್ಯಾಲಯಗಳಿಗೂ ಅನ್ವಯವಾಗುವಂತೆ, ಸಕಾಲ ಸೇವೆಗಳಿಗೆ ಏಕರೂಪದ ಅರ್ಜಿ ನಮೂನೆ, ಸೇವಾ ವಿತರಣಾ ವಿಧಾನ(ಕಾರ್ಯಹರಿವು, ಸೇವಾಶುಲ್ಕ) ಏಕರೂಪಗೊಳಿಸುವ ಸಂಬಂಧ, ದಿನಾಂಕ:25.08.2020 ರಂದು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ನೇತೃತ್ವದಲ್ಲಿ, ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಸಚಿವರ ಜೊತೆ ಸಭೆ ನಡೆಸಿ, ಉನ್ನತ ಶಿಕ್ಷಣ ಇಲಾಖೆಯಡಿಯ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳಿಗೆ ಅನ್ವಯವಾಗುವಂತೆ, ಸಕಾಲ ಸೇವೆಗಳ ಅರ್ಜಿ ನಮೂನೆ, ಸೇವಾ ವಿತರಣಾ ವಿಧಾನ (ಕಾರ್ಯಹರಿವು, ಸೇವಾಶುಲ್ಕ) ಗಳನ್ನು ಏಕರೂಪದಲ್ಲಿರಿಸಲು ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

ಈ ಹಿನ್ನೆಲೆಯಲ್ಲಿ ಸರ್ಕಾರದ ಇ–ಆಡಳಿತ ಇಲಾಖೆ (ಸಿಸುಆಇ) ಅಡಿಯ, ವಿದ್ಯುನ್ಮಾನ ನಾಗರೀಕ ಸೇವಾ ವಿತರಣಾ ನಿರ್ದೇಶನಾಲಯ(ಇಡಿಸಿಎಸ್) ಇಲಾಖೆಯು 31 ಸಕಾಲ ಸೇವೆಗಳಿಗೆ, ಆನ್‌ಲೈನ್ ತಂತ್ರಾಂಶ ಅಭಿವೃದ್ಧಿಗೆ ಕ್ರಮಕೈಗೊಂಡಿದ್ದು, ಅಭಿವೃದ್ಧಿ ಪಡಿಸಲಾಗಿರುವ ಆನ್‌ಲೈನ್ ತಂತ್ರಾಂಶವನ್ನು ಬಳಸಿಕೊಂಡು ನೀಡಬಹುದಾದ ಸೇವೆಗಳಿಗೆ ಮ್ಯಾನ್ಯುಯಲ್ ಆಗಿ ಅರ್ಜಿ ಸ್ವೀಕರಿಸಿರುವುದನ್ನು ರದ್ದುಪಡಿಸಿ ಹಾಗೂ ಅರ್ಜಿ ಸ್ವೀಕೃತಿಗೆ ಆನ್‌ಲೈನ್ ತಂತ್ರಾಂಶದ ಬಳಕೆಯನ್ನು ಕಡ್ಡಾಯಗೊಳಿಸಲು ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 34 ಇಜಿಬಿವಿ2020(ಭಾಗ–1),**

**ಬೆಂಗಳೂರು, ದಿನಾಂಕ: 28.05.2021**

ಮೇಲಿನ ಪ್ರಸ್ತವನೆಯನ್ನು ಕೂಲಂಕಶವಾಗಿ ಪರಿಶೀಲಿಸಲಾಗಿ, ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಇಲಾಖೆಗಳು

ಮತ್ತು ಸಾರ್ವಜನಿಕ ವಿಶ್ವವಿದ್ಯಾಲಯಗಳು, ಎಲ್ಲಾ ವಿಶ್ವವಿದ್ಯಾಲಯಗಳಿಗೆ ಅನ್ವಯವಾಗುವಂತೆ, ಏಕರೂಪಗೊಳಿಸಲಾಗಿರುವ ಅರ್ಜಿ ನಮೂನೆ, ಸೇವಾ ವಿತರಣಾ ವಿಧಾನ (ಕಾರ್ಯಹರಿವು, ಸೇವಾಶುಲ್ಕ) ಗಳನ್ನು ಬಳಸಿಕೊಂಡು, ಕರ್ನಾಟಕ ಸಕಾಲ ಸೇವೆಗಳ ಮುಖಾಂತರ ಒದಗಿಸುವ ನಾಗರೀಕ ಸೇವೆಗಳನ್ನು, ಈಗಾಗಲೇ ಅಭಿವೃದ್ಧಿ ಪಡಿಸಲಾಗಿರುವ ಸೇವಾಸಿಂಧು ಆನ್‌ಲೈನ್ ತಂತ್ರಾಂಶವನ್ನು ಬಳಸಿಕೊಂಡು, ಅರ್ಜಿ ಸ್ವೀಕರಿಸಿ, ಆನ್‌ಲೈನ್ ತಂತ್ರಾಂಶದ (ಸೇವಾಸಿಂಧು) ಮುಖಾಂತರ ಒದಗಿಸುವುದನ್ನು ಕಡ್ಡಾಯಗೊಳಿಸಲಾಗಿದೆ ಹಾಗೂ ಮ್ಯಾನ್ಯುವಲ್ ಆಗಿ ಅರ್ಜಿ ಸ್ವೀಕರಿಸಿರುವುದನ್ನು ಕೂಡಲೇ ರದ್ದುಗೊಳಿಸಲಾಗಿದೆ. ಈ ಸಂಬಂಧ ಇ-ಆಡಳಿತ ಇಲಾಖೆಯು, ಅನುಬಂಧ-1 ರಲ್ಲಿ ಪಟ್ಟಿ ಮಾಡಿರುವ ವಿಶ್ವವಿದ್ಯಾಲಯಗಳಲ್ಲಿರುವ ಆನ್‌ಲೈನ್ ಸೇವೆಗಳನ್ನು ಸಾರ್ವಜನಿಕರ ಉಪಯೋಗಕ್ಕೆ https://sevasindhu.karnataka.gov.in/Sevasindhu/Kannada ಜಾಲತಾಣದಲ್ಲಿ ಪ್ರಕಟಿಸಿರುವಂತೆ, ಎಲ್ಲಾ ಸೇವಾಸಿಂಧು ಸೇವೆಗಳನ್ನು ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ಕೂಡಲೇ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶೀತಲ್.ಎಂ.ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ
(ವಿಶ್ವವಿದ್ಯಾಲಯಗಳು-1)
ಉನ್ನತ ಶಿಕ್ಷಣ ಇಲಾಖೆ.

ಪ್ರತಿಯನ್ನು:-

1. ಕುಲಪತಿಗಳು, ಉನ್ನತ ಶಿಕ್ಷಣ ಇಲಾಖೆಯಡಿಯ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳು.
2. ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕರ್ನಾಟಕ ಸರ್ಕಾರ.
3. ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಇ-ಆಡಳಿತ ಇಲಾಖೆ, ಕರ್ನಾಟಕ ಸರ್ಕಾರ.
5. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ಕುಲಸಚಿವರು, ಉನ್ನತ ಶಿಕ್ಷಣ ಇಲಾಖೆಯಡಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
7. ನಿರ್ದೇಶಕರು, ಸಕಾಲ ಮಿಷಿನ್ ಕರ್ನಾಟಕ ಸರ್ಕಾರ.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರ – ಉನ್ನತ ಶಿಕ್ಷಣ ಇಲಾಖೆ

**ವಿಶ್ವವಿದ್ಯಾಲಯಗಳಲ್ಲಿ, ಆನ್‌ಲೈನ್ ಸೇವಾಸಿಂದು ಸೇವೆಗಳ ಪಟ್ಟಿ**

ಅನುಬಂಧ–1

| Sl. No | Name of the Service |
|---|---|
| 1. | Issue of Transfer Certificate |
| 2. | Issue of Admission Extract |
| 3. | Issue of Character Certificate |
| 4. | Issue of Study Certificate |
| 5. | Issue of No due certificate |
| 6. | Distribution of Marks Cards |
| 7. | Distribution of Bus Pass |
| 8. | Issue of No Objection Certificate |
| 9. | Distribution of Scholarships |
| 10. | Distribution of identity cards |
| 11. | Returning of Original Documents |
| 12. | Distribution of Degree Certificates |
| 13. | Forwarding of applications of students/staff to the higher authorities |
| 14. | Issue of Migration Certificate |
| 15. | Issue of duplicate copies of documents |
| 16. | Name Correction in the marks card as per SSLC/PUC |
| 17. | Removal of Withheld from the marks card |
| 18. | Removal of Non-completion of lower exam (NCL) |
| 19. | Provisional Degree Certificate (PDC) |
| 20. | Duplicate Marks cards |
| 21. | Duplicate Degree certificate |
| 22. | Official Transcript |
| 23. | Duplicate Migration Certificate |
| 24. | Degree Certificate |
| 25. | Genuineness of marks card/ Degree Certificate |
| 26. | Change of the College |
| 27. | Readmission |
| 28. | Change of Course |
| 29. | Change of Combination |
| 30. | Eligibility Certificate |
| 31. | Granting of Temporary/Renewal Affiliation |

(ಶೀತಲ್.ಎಂ.ಹಿರೇಮಠ)

ಸರ್ಕಾರದ ಅಧೀನ ಕಾರ್ಯದರ್ಶಿ

(ವಿಶ್ವವಿದ್ಯಾಲಯಗಳು–1)

ಉನ್ನತ ಶಿಕ್ಷಣ ಇಲಾಖೆ.